ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಅಡ್ಡರಸ್ತೆ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ತಬೆಕಾ/01/2017-18 ದಿನಾಂಕ: /01/2018

## ಜ್ಞಾಪನ

ವಿಷಯ :- 250 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಈಗಾಗಲೇ ಕೈಗೊಂಡಿರುವ ತರಬೇತಿ ಕಾರ್ಯಕ್ರಮದ (TALP Induction-1) ಖರ್ಚು ವೆಚ್ಚಗಳನ್ನು ಸಂಚಿತನಿಧಿಯಿಂದ ನಿರ್ವಹಿಸಿ ಸರಿದೂಗಿಸುವ ಬಗ್ಗೆ.

ಉಲ್ಲೇಖ :- 1) ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಯೋಯೋಕ 2017 (ಅನುಬಂಧ-10), ಬೆಂಗಳೂರು ದಿನಾಂಕ: 29-05-2017

2) ಸರ್ಕಾರದ ಆದೇಶ ಸಂಖ್ಯೆ : ಇಡಿ 193 ಮಾಹಿತಿ 2017, ಬೆಂಗಳೂರು, ದಿನಾಂಕ:27-11-2017

****

ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ಪದವಿ ಪೂರ್ವ ಶಿಕ್ಷಣ ಇಲಾಖೆಯು 2017-18ನೇ ಶೈಕ್ಷಣಿಕ ಸಾಲಿನಿಂದ ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮವನ್ನು (TALP- Technology Assited Learning Programme) ಡಿಎಸ್ಇಆರ್‌ಟಿ ಮುಖಾಂತರ ಅನುಷ್ಠಾನಗೊಳಿಸಲಾಗಿದ್ದು, ಕಾರ್ಯಕ್ರಮದ ಮೆದಲ ಹಂತವಾಗಿ 250 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿಜ್ಞಾನ ವಿಭಾಗದ ಪಿಸಿಎಂಬಿ ಸಂಯೋಜನೆಯ ಉಪನ್ಯಾಸಕರಿಗೆ ಜಿಲ್ಲಾ ಮಟ್ಟದಲ್ಲಿ ಸನಿವಾಸ TALP Induction-1 ತರಬೇತಿ ಕಾರ್ಯಕ್ರಮವು ಪ್ರಸ್ತುತ ಈಗಾಗಲೇ ಕೈಗೊಳ್ಳಲಾಗಿದೆ.

ಸರ್ಕಾರದ ಆದೇಶದನ್ವಯ ಈ ತರಬೇತಿ ಕಾರ್ಯದಲ್ಲಿ ತರಬೇತಿ ಪಡೆದ ಪ್ರತಿ ಉಪನ್ಯಾಸಕರಿಗೆ ಪ್ರತಿ ದಿನಕ್ಕೆ Unit Cost ರೂ. 470.00 ರಂತೆ 10 ದಿನಗಳಿಗೆ ಖರ್ಚುವೆಚ್ಚ ಭರಸುವುದು ಅಗತ್ಯವಿರುತ್ತದೆ. ಉಲ್ಲೇಖ(2) ರಂತೆ DSERT ಯಿಂದ DPUE TALP ಕಾರ್ಯಕ್ರಮಕ್ಕೆ ಅನುದಾನ SLP ಲೆಕ್ಕ ಶೀರ್ಷಿಕೆಯಲ್ಲಿ 250 ಲಕ್ಷಗಳು ಬಿಡುಗಡೆಯಾಗಿದ್ದು ತಾಂತ್ರಿಕ ಕಾರಣಗಳಿಂದ ವಿಳಂಬವಾಗಿರುವ ಹಿನ್ನೆಲೆಯಲ್ಲಿ ಸದರಿ ವೆಚ್ಚವನ್ನು ಉಪನಿರ್ದೇಕರ ಸಂಚಿತ ನಿಧಿಯಿಂದ ಭರಿಸಬಹುದಾಗಿದೆ. ಇಲ್ಲದಿದ್ದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಚಿತ ನಿಧಿಯಿಂದ ಭರಿಸಲು ಅವಕಾಶ ನೀಡಿದೆ. ಲಭ್ಯವಿರುವ ಕಾಲೇಜುಗಳ ಸಂಚಿತ ನಿಧಿಯಿಂದ ಉಪನಿರ್ದೇಶಕರ ಖಾತೆಗೆ ವರ್ಗಾಯಿಸಿಕೊಂಡು ಭರಿಸಬಹುದಾಗಿದೆ. ಇಲಾಖೆಯಿಂದ ಅನುಧಾನ ಬಿಡುಗಡೆಯಾದ ನಂತರ ಜಿಲ್ಲಾ ಉಪನಿರ್ದೇಕರ ಖಾತೆಯಿಂದ ಸದರಿ ಕಾಲೇಜಿನ ಖಾತೆಗೆ ವರ್ಗಾಯಿಸಲು ಸೂಚಿಸಿದೆ. ಭರಿಸಬೇಕಾದ ಒಟ್ಟು ಮೊತ್ತದ ಪಟ್ಟಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.

3/1/18

ನಿರ್ದೇಶಕರು,

ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

1. ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರೆಗೆ ಮುಂದಿನ ಸೂಕ್ತ ಕ್ರಮಕ್ಕಾಗಿ,
2. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ,
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಅಡ್ಡರಸ್ತೆ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ತಬೆಕಾ/01/2017-18 ದಿನಾಂಕ:21 /12/2017

## ಜ್ಞಾಪನ

ವಿಷಯ :- 2017-18 ನೇ ಸಾಲಿನ TALP ಕಾರ್ಯಕ್ರಮದಡಿಯಲ್ಲಿ ನಡೆಯುತ್ತಿರುವ 10 ದಿನಗಳ ಸನಿವಾಸ Induction-1 ತರಬೇತಿಗೆ ತಗಲುವ ವೆಚ್ಚವನ್ನು ಜಿಲ್ಲಾ ಉಪನಿರ್ದೇಶಕರ ಖಾತೆಗೆ ಬಿಡುಗಡೆಗೊಳಿಸುವ ಕುರಿತು.

ಉಲ್ಲೇಖ :- 1. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ಮಾಹಿತಿ 2016, ಬೆಂಗಳೂರು ದಿನಾಂಕ: 05/07/2016

2. ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಯೋಯೋಕ 2017 (ಅನುಬಂಧ-10), ಬೆಂಗಳೂರು ದಿನಾಂಕ: 29-05-2017
3. ಸರ್ಕಾರದ ಆದೇಶ ಸಂಖ್ಯೆ: ಇಡಿ 193 ಮಾಹಿತಿ 2017, ಬೆಂಗಳೂರು ದಿನಾಂಕ: 27/11/2017
4. ಸುತ್ತೋಲೆ ಸಂಖ್ಯೆ: ಪಪೂಶಿಇ/ಇ-ಆಡಳಿತ/TALP/01/2017-18 ದಿನಾಂಕ: 03/11/2017
5. ಸುತ್ತೋಲೆ ಸಂಖ್ಯೆ: ಪಪೂಶಿಇ/ಇ-ಆಡಳಿತ/TALP/01/2017-18 ದಿನಾಂಕ: 13/11/2017

****

### ಪ್ರಸ್ತಾವನೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರನ್ವಯ 2017-18 ನೇ ಸಾಲಿನಿಂದ 250 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮ (TALP)ನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾಲೇಜುಗಳ PCMB ಉಪನ್ಯಾಸಕರ Induction-1 ತರಬೇತಿಯನ್ನು (10 ದಿನಗಳ ಸನಿವಾಸ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನವೆಂಬರ್ ಮಾಹೆಯಲ್ಲಿ ನಡೆಸಲು ಉಲ್ಲೇಖ 4 ಮತ್ತು 5 ರನ್ವಯ ಜಿಲ್ಲಾ ಉಪನಿರ್ದೇಶಕರಿಗೆ ಸೂಚಿಸಲಾಗಿತ್ತು. ಉಲ್ಲೇಖ(2) ರನ್ವಯ ಒಬ್ಬ ಉಪನ್ಯಾಸಕರಿಗೆ ಪ್ರತಿದಿನಕ್ಕೆ ರೂ.470/-ರಂತೆ 10 ದಿನಗಳಿಗೆ ತರಬೇತಿ ವೆಚ್ಚವನ್ನು ಉಪನ್ಯಾಸಕರ ಸಂಖ್ಯೆಗಳಿಗನುಗುಣವಾಗಿ ಜಿಲ್ಲಾ ಉಪನಿರ್ದೇಶಕರಿಗೆ ಅನುಬಂಧ-1ರಲ್ಲಿರುವಂತೆ ನೀಡಬಹುದಾಗಿದ್ದು, ಈ ಕೆಳಕಂಡಂತೆ ಆದೇಶಿಸಿದೆ. ರಾಜ್ಯಾದ್ಯಂತ ಒಟ್ಟು 915 ಉಪನ್ಯಾಸಕರ TALP Induction-1 ತರಬೇತಿಗೆ ತಗಲುವ ಅನುದಾನವನ್ನು ಜಿಲ್ಲಾ ಉಪನಿರ್ದೇಶಕರುಗಳಿಗೆ ಲೆಕ್ಕಶೀರ್ಷಿಕೆ 2202-80-003-0-05-422 (ಎಸ್.ಸಿ.ಪಿ) ಅಡಿಯಲ್ಲಿ ಒಟ್ಟು ರೂ. 43,00,500/- ಗಳನ್ನು(ನಲವತ್ತ್ಮೂರು ಲಕ್ಷದ ಐದುನೂರು ರೂಗಳು ಮಾತ್ರ) ಈ ಕೆಳಕಂಡಂತೆ ಮಂಜೂರು ಮಾಡಬೇಕಾಗಿರುತ್ತದೆ.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತರಬೇತಿಗೆ ಹಾಜರಾದ ಉಪನ್ಯಾಸಕರ ಸಂಖ್ಯೆ | ಲೆಕ್ಕಶೀರ್ಷಿಕೆ 2202-80-003-0-05-422(ಎಸ್‌ಸಿಪಿ) | ಲೆಕ್ಕಶೀರ್ಷಿಕೆ 2202-80-003-0-05-423 (ಟಿಎಸ್‌ಪಿ) | ಒಟ್ಟು ಅನುದಾನ |
|---|---|---|---|---|---|
| 1 | ಬೆಂಗಳೂರು ಉತ್ತರ | 32 | 1,50,400/- | | 1,50,400/- |
| 2 | ಬೆಂಗಳೂರು ದಕ್ಷಿಣ | 19 | 89,300/- | | 89,300/- |
| 3 | ಬೆಂಗಳೂರು ಗ್ರಾಮಾಂತರ | 9 | 42,300/- | | 42,300/- |

. . . 2

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತರಬೇತಿಗೆ ಹಾಜರಾದ ಉಪನ್ಯಾಸಕರ ಸಂಖ್ಯೆ | ಲೆಕ್ಕಶೀರ್ಷಿಕೆ 2202-80-003-0-05-422(ಎಸ್‌ಸಿಪಿ) | ಲೆಕ್ಕಶೀರ್ಷಿಕೆ 2202-80-003-0-05-423 (ಟಿಎಸ್‌ಪಿ) | ಒಟ್ಟು ಅನುದಾನ |
|---|---|---|---|---|---|
| 4 | ರಾಮನಗರ | 24 | 1,12,800/- | | 1,12,800/- |
| 5 | ಬಳ್ಳಾರಿ | 27 | 126900/- | | 126900/- |
| 6 | ಬೆಳಗಾವಿ | 12 | 56,400/- | | 56,400/- |
| 7 | ಚಿಕ್ಕೋಡಿ | 14 | 65,800/- | | 65,800/- |
| 8 | ಬಾಗಲಕೋಟ | 21 | 98,700/- | | 98,700/- |
| 9 | ವಿಜಾಪುರ | 22 | 1,03,400/- | | 1,03,400/- |
| 10 | ಬೀದರ | 20 | 94,000/- | | 94,000/- |
| 11 | ದಾವಣಗೆರೆ | 45 | 2,11,500/- | | 2,11,500/- |
| 12 | ಚಿತ್ರದುರ್ಗ | 54 | 2,53,800/- | | 2,53,800/- |
| 13 | ಚಿಕ್ಕಮಗಳೂರು | 12 | 56,400/- | | 56,400/- |
| 14 | ಗದಗ | 3 | 14,100/- | | 14,100/- |
| 15 | ಹಾವೇರಿ | 17 | 79,900/- | | 79,900/- |
| 16 | ಧಾರವಾಡ | 8 | 37,600/- | | 37,600/- |
| 17 | ಗುಲ್ಬರ್ಗಾ | 25 | 1,17,500/- | | 1,17,500/- |
| 18 | ಯಾದಗಿರಿ | 12 | 56,400/- | | 56,400/- |
| 19 | ಹಾಸನ | 30 | 1,41,000/- | | 1,41,000/- |
| 20 | ಚಿಕ್ಕಬಳ್ಳಾಪುರ | 21 | 98,700/- | | 98,700/- |
| 21 | ಕೋಲಾರ | 39 | 1,83,300/- | | 1,83,300/- |
| 22 | ಚಾಮರಾಜನಗರ | 18 | 84,600/- | | 84,600/- |
| 23 | ಮಂಡ್ಯ | 48 | 2,25,600/- | | 2,25,600/- |
| 24 | ಮೈಸೂರು | 98 | 4,60,600/- | | 4,60,600/- |
| 25 | ಉತ್ತರ ಕನ್ನಡ | 32 | 1,50,400/- | | 1,50,400/- |
| 26 | ಕೊಪ್ಪಳ | 20 | 94,000/- | | 94,000/- |
| 27 | ರಾಯಚೂರು | 03 | 14,100/- | | 14,100/- |
| 28 | ಉಡುಪಿ | 39 | 1,83,300/- | | 1,83,300/- |
| 29 | ದಕ್ಷಿಣ ಕನ್ನಡ | 24 | 1,12,800/- | | 1,12,800/- |
| 30 | ಶಿವಮೊಗ್ಗ | 89 | 4,18300/- | | 4,18,300/- |
| 31 | ತುಮಕೂರು | 74 | 3,47,800/- | | 3,47,800/- |
| 32 | ಕೊಡಗು | 4 | 18,800/- | | 18,800/- |
| | TOTAL | 915 | 43,00,500/- | | 43,00,500/- |

**ಆದೇಶ:**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2017-18 ನೇ ಶೈಕ್ಷಣಿಕ ಸಾಲಿನಿಂದ TALP ಕಾರ್ಯಕ್ರಮದ ಅನುಷ್ಠಾನಕ್ಕಾಗಿ 250 ಸ.ಪ.ಪೂ.ಕಾಲೇಜುಗಳ ಉಪನ್ಯಾಸಕರಿಗೆ Induction-1, 10ದಿನಗಳ ಸನಿವಾಸ ತರಬೇತಿಗೆ ಮಾಡಲಾದ ವೆಚ್ಚ ರೂ. 43,00,500/- ಗಳನ್ನು (ನಲವತ್ತ್ಮೂರು ಲಕ್ಷದ ಐದುನೂರು ಮಾತ್ರ) ಜಿಲ್ಲಾ ಹಂತದಲ್ಲಿ ತರಬೇತಿಯ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಜಿಲ್ಲಾ ಉಪನಿರ್ದೇಶಕರ ಖಾತೆಗಳಿಗೆ ಒಟ್ಟು ರೂ.43,00,500/- (ನಲವತ್ತ್ಮೂರು ಲಕ್ಷದ ಐದುನೂರು ರೂಗಳ ಮಾತ್ರ) ಗಳನ್ನು ಅನುಬಂಧ-1 ರಂತೆ ಲೆಕ್ಕಶೀರ್ಷಿಕೆ 2202-80-003-0-05-422 (ಎಸ್.ಸಿ.ಪಿ) ಅಡಿಯಲ್ಲಿ ಭರಿಸಲು ಅನುದಾನ ಬಿಡುಗಡೆ ಮಾಡಲು ಸೂಚಿಸಲಾಗಿದೆ.

. . .3



ಷರತ್ತುಗಳು.

1. ತರಬೇತಿ ಕಾರ್ಯಕ್ರಮದ ವಿವರವಾದ, ದೃಡೀಕರಿಸಿದ ವರದಿಯನ್ನು ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆರವರು ನೀಡುವುದು.
2. ಬಿಡುಗಡೆ ಮಾಡಿರುವ ಅನುದಾನವನ್ನು ಕೂಡಲೇ ಬಳಸಿಕೊಂಡು, ಉಳಿಕೆಯಾಗುವ ಅನುದಾನವನ್ನು ಇಲಾಖೆಯಿಂದ ಬಿಡುಗಡೆಯಾದ ಲೆಕ್ಕಶೀರ್ಷಿಕೆಗೆ ಮರುಪಾವತಿಸಲು ಸೂಚಿಸಿದೆ.
3. ಪ್ರಸ್ತುತ ನೀಡುತ್ತಿರುವ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಅನುದಾನ ಬಿಡುಗಡೆ ಮಾಡಿದ ಒಂದು ವಾರದೊಳಗೆ ಕಡ್ಡಾಯವಾಗಿ ಸಲ್ಲಿಸುವುದು.
4. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಉಲ್ಲೇಖ-2ರ ನಿಬಂಧನೆಗಳಂತೆ TALP ತರಬೇತಿ ಕಾರ್ಯಕ್ರಮಗಳಿಗೆ ಮಾತ್ರ ವೆಚ್ಚ ಭರಿಸತಕ್ಕದ್ದು.
5. ವೆಚ್ಚಕ್ಕೆ ಸಂಬಂಧಿಸಿದ ವೋಚರ್ಸಗಳ ಪರಿಶೀಲನೆ ಮತ್ತು ಪಾವತಿ ಹೊಣೆಗಾರಿಕೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆಯವರ ಹೊಣೆಗಾರಿಕೆ ಆಗಿರುತ್ತದೆ.
6. ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನದ ವೆಚ್ಚಕ್ಕೆ ಸಂಬಂಧಿಸಿದಂತೆ ವರದಿಯನ್ನು 'ಲೆಕ್ಕಪತ್ರಾಧಿಕಾರಿಗಳು, ನಿರ್ದೇಶಕರ ಕಛೇರಿ ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012' ರವರಿಗೆ ಸಲ್ಲಿಸತಕ್ಕದ್ದು.
7. ಅವಶ್ಯಕವಿರುವ ವೆಚ್ಚ ಭರಿಸಿದ ನಂತರ ಬಳಕೆ ಪ್ರಮಾಣ ಪತ್ರವನ್ನು ಉಪ ನಿರ್ದೇಶಕರು(ಪರೀಕ್ಷೆ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012'. ಇವರಿಗೆ ಸಲ್ಲಿಸತಕ್ಕದ್ದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು,

1. ಸರ್ಕಾರದ ಕಾರ್ಯದರ್ಶಿ( ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ನಿರ್ದೇಶಕರು, ಡಿಎಸ್ಇಆರ್‌ಟಿ, ಬನಶಂಕರಿ, ಬೆಂಗಳೂರು
3. ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ.
4. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ.
5. ಲೆಕ್ಕ ಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮುಂದಿನ ಕ್ರಮಕ್ಕಾಗಿ.
6. ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
7. ಕಛೇರಿ ಪ್ರತಿ.